ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 249
ಸದಸ್ಯರ ಹೆಸರು : ಶ್ರೀ ಪ್ರಕಾಶ್.ಕೆ.ರಾಥೋಡ್
(ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 02-02-2021
ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮೈಸೂರು ಲ್ಯಾಂಪ್ಸ್ ಸಂಸ್ಥೆಯನ್ನು ಮುಚ್ಚಲಾಗಿದೆಯೇ;	ಹೌದು
ಆ)	ಹಾಗಿದ್ದಲ್ಲಿ, ಸಂಸ್ಥೆಯಲ್ಲಿ ಉಳಿದಿರುವ ಸಿಬ್ಬಂದಿ ಎಷ್ಟು; ಯಾವ ಯಾವ ಸಂಸ್ಥೆಗಳಿಗೆ ನಿಯೋಜನೆ ಮಾಡಲಾಗಿದೆ; ಅಥವಾ ವರ್ಗಾಯಿಸಲಾಗಿದೆ; (ವಿವರ ನೀಡುವುದು)	ಮೈಸೂರು ಲ್ಯಾಂಪ್ಸ್ ಕಾರ್ಖಾನೆಯನ್ನು ಮುಚ್ಚಿದ ನಂತರ 88 ನೌಕರರು ಉಳಿದಿರುತ್ತಾರೆ. ಈ ಪೈಕಿ 4 ನೌಕರರು ಮೃತರಾಗಿದ್ದು 5 ನೌಕರರು ವಯೋ ನಿವೃತ್ತಿ ಹೊಂದಿರುತ್ತಾರೆ. ಉಳಿದ 79 ನೌಕರರನ್ನು ಕರ್ನಾಟಕ ರಾಜ್ಯ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯಲ್ಲಿ ವಿಲೀನಗೊಳಿಸಲಾಗಿದೆ. ಈ ಪೈಕಿ 63 ನೌಕರರು ಕಾರ್ಯವರದಿ ಮಾಡಿಕೊಂಡಿದ್ದು 16 ನೌಕರರು ಕಾರ್ಯವರದಿ ಮಾಡಿಕೊಂಡಿರುವುದಿಲ್ಲ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ 19 ಮೈಸೂರು ಲ್ಯಾಂಪ್ಸ್ ವರ್ಕ್ಸ್ ನೌಕರರಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: DPAR/66/DiSeNi2019, ದಿನಾಂಕ 13.05.2020ರಲ್ಲಿ ಅವರು ಕಾರ್ಯನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಇಲಾಖೆಗಳಲ್ಲಿ ಅರ್ಹತೆಯ ಆಧಾರದ ಮೇಲೆ ವಿಲೀನಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಇ)	ಮೈಸೂರು ಲ್ಯಾಂಪ್ಸ್ ಸಂಸ್ಥೆಯಲ್ಲಿ ನೌಕರರು ತಮ್ಮ ಡಿ.ಎ. ಹಾಗೂ ಇನ್ನಿತರ ಸೌಲಭ್ಯಗಳನ್ನು ಪಡೆಯದೇ ಸಂಸ್ಥೆ ಉಳಿವಿಗಾಗಿ ನೀಡಿದ್ದು, ಇವರಿಗೆ ಸರ್ಕಾರದಿಂದ ನೆರವು ನೀಡಲಾಗುವುದೇ;	ಈ ವಿಷಯದ ಬಗ್ಗೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾವೆಗಳು ಬಾಕಿ ಇದ್ದು ಇತ್ಯರ್ಥವಾಗಬೇಕಾಗಿರುತ್ತದೆ.
ಈ)	ಮೈಸೂರು ಲ್ಯಾಂಪ್ಸ್ ಸಂಸ್ಥೆಯ ಒಟ್ಟು ಆಸ್ತಿ ಮೌಲ್ಯ ಎಷ್ಟು; ಈ ಆಸ್ತಿಯನ್ನು ಯಾವ ಸಂಸ್ಥೆಗೆ ಪರಭಾರೆ ಮಾಡಲಾಗಿದೆ; ನೌಕರರು ಹಾಗೂ ಷೇರುದಾರರಿಗೆ ನೀಡಬೇಕಾಗಿರುವ ಹಣದ ಮೊತ್ತ ಎಷ್ಟು? (ವಿವರ ನೀಡುವುದು)	ಮೈಸೂರು ಲ್ಯಾಂಪ್ಸ್ ಸಂಸ್ಥೆಯ ಒಟ್ಟು ಮೌಲ್ಯ ದಿನಾಂಕ 31.3.2020ರಂತೆ ರೂ.11.14 ಕೋಟಿ ಆಗಿರುತ್ತದೆ. ಭೂಸ್ವತ್ತಿನ ಮೌಲ್ಯವನ್ನು 1992ರ ನಂತರ ಪುನರ್ ಮೌಲ್ಯ ಮಾಡಿರುವುದಿಲ್ಲ. ಸಂಸ್ಥೆಯ ಆಸ್ತಿಯನ್ನು ಕರ್ನಾಟಕ ಸರ್ಕಾರಕ್ಕೆ ಮಾತ್ರ ಅಡಮಾನ ಮಾಡಲಾಗಿದೆ. ಷೇರುದಾರರಿಗೆ ಹಾಗೂ ನೌಕರರಿಗೆ ನೀಡಬೇಕಾದ ಹಣದ ಮೌಲ್ಯದ ಬಗ್ಗೆ ನಿರ್ಣಯವಾಗಿರುವುದಿಲ್ಲ.

ಸಿಐ 05 ಸಿಇಎಲ್ 2021 (ಇ)

(ಜಗದೀಶ ಶೆಟ್ಟರ),
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು